# ಆಸಿನ್ ಮತ್ತು ಅನಾಸಿನ್!

ಬಾಲಿವುಡ್‌ನಲ್ಲಿ ಸೂಪರ್‌ಸ್ಟಾರ್‌ಗಳ ಜತೆ ಮಾತ್ರ ನಟಿಸುವ ಹುಮ್ಮಸ್ಸಿನಲ್ಲಿರುವ ದಕ್ಷಿಣದ ತಾರೆ ಆಸಿನ್ ಈಗ ಬಹಿಷ್ಕಾರದ ಬೆದರಿಕೆ ಎದುರಿಸುತ್ತಿದ್ದಾಳೆ. ಅದಕ್ಕೆ ಕಾರಣ ಆಕೆಯ ಶ್ರೀಲಂಕಾ ಟ್ರಿಪ್!

ಸಲ್ಮಾನ್ ಖಾನ್ ಜತೆ ಆಸಿನ್ ನಟಿಸುತ್ತಿರುವ 'ರೆಡೀ' ಚಿತ್ರದ ಶೂಟಿಂಗ್ ಶ್ರೀಲಂಕಾದಲ್ಲಿ ನಡೆದಿದೆ. ಅದನ್ನೇ ನೆಪವಾಗಿಟ್ಟುಕೊಂಡು ದಕ್ಷಿಣ ಭಾರತದ ಚಲನಚಿತ್ರ ನಟ ನಟಿಯರ ಸಂಘಟನೆ (ಸಿಫಾ) ಆಸಿನ್ ಚಿತ್ರಗಳಿಗೆ ಬಹಿಷ್ಕಾರ ಒಡ್ಡುವುದಾಗಿ ಬೆದರಿಸಿದೆ. ಕೊಲಂಬೋದಲ್ಲಿ ಕಳೆದ ತಿಂಗಳು ಐಫಾ ಚಿತ್ರಪ್ರಶಸ್ತಿಯ ಸಮಾರಂಭ ನಡೆದಾಗ ತಮಿಳು ಚಿತ್ರರಂಗದ ದಿಗ್ಗಜರು ಅದಕ್ಕೆ ಬಹಿಷ್ಕಾರ ಹಾಕಿದ್ದರು. ಅಲ್ಲಿನ ನಟರ್‍ಯಾರೂ ಭಾಗವಹಿಸಿರಲಿಲ್ಲ. ಬಾಲಿವುಡ್‌ನ ಸೂಪರ್‌ಸ್ಟಾರ್ ಅಮಿತಾಭ್ ಕೂಡಾ ಐಫಾದಿಂದ ಹೊರಗೇ ಉಳಿದರು. ಆದರೆ ಸಲ್ಮಾನ್ ಖಾನ್ ಮಾತ್ರ ಯಾರನ್ನೂ ಕ್ಯಾರೇ ಅನ್ನದೆ ಐಫಾಗೆ ತೆರಳಿ ಹಾಡಿ ಕುಣಿದು ಬಂದಿದ್ದ! ಈಗ ಸಲ್ಮಾನ್ ಜತೆಗೆ ಆಸಿನ್ ಶೂಟಿಂಗ್ ಸಲುವಾಗಿ ಶ್ರೀಲಂಕಾಗೆ ಹೋದದ್ದೇ ಆಕೆಗೆ ಮುಳುವಾಗುವಂತಿದೆ.

ಸಿಫಾ ಅಧ್ಯಕ್ಷ ನಟ ಶರತ್‌ಕುಮಾರ್‌ನನ್ನು ಭೇಟಿಯಾಗಿರುವ ಆಸಿನ್, 'ನಾನು ಐಫಾದಲ್ಲಿ ಭಾಗವಹಿಸಿಲ್ಲ. ವೃತ್ತಿಪರ ಕಾರಣಕ್ಕಾಗಿ ಮಾತ್ರ ಶ್ರೀಲಂಕಾಗೆ ಹೋಗಿದ್ದೇನೆ' ಎಂದು ಸಮಾಧಾನ ಮಾಡಲು ಯತ್ನಿಸಿದ್ದಾಳೆ. ಆದರೆ ಸಿಫಾ ಸದಸ್ಯರು ಅಲ್ಲಾಡುತ್ತಿಲ್ಲ. ಈ ಮಧ್ಯೆ ಉತ್ತರ ಅಮೆರಿಕಾದ ತಮಿಳು ಸಂಘವೂ ಆಸಿನ್ ಚಿತ್ರಗಳಿಗೆ ವಿದೇಶಗಳಲ್ಲಿ ಬಹಿಷ್ಕಾರ ಹಾಕಲು ನಿರ್ಧರಿಸಿರುವುದು 'ರೆಡೀ' ನಿರ್ಮಾಪಕರಿಗೆ ಕಿರಿಕಿರಿ ತಂದಿದೆಯಂತೆ. ಒಟ್ಟಾರೆ ಆಸಿನ್ ನಿರ್ಮಾಪಕರ ಪಾಲಿಗೆ ಹೊಸ 'ಅನಾಸಿನ್' ಆದಂತಿದೆ!



# ಐಶ್-ಸಲ್ಲೂ ಸ್ಪರ್ಧೆ?

ಈಗಾಗಲೆ ಮಾಧ್ಯಮಗಳಲ್ಲಿ ಸಖತ್ ಸುದ್ದಿ ಮಾಡುತ್ತಿರುವ ಸಲ್ಮಾನ್ ಖಾನ್‌ನ 'ದಬಾಂಗ್' ಚಿತ್ರ ಸೆಪ್ಟೆಂಬರ್ 10ರಂದು ತೆರೆಗೆ ಬರಲು ಸಿದ್ಧತೆ ನಡೆಸಿದೆ. ಈ ಚಿತ್ರಕ್ಕೆ ಪೈಪೋಟಿ ನೀಡಲು ಬಾಲಿವುಡ್‌ನ ಬೇರೆ ನಿರ್ಮಾಪಕರು ಸಿದ್ಧರಿಲ್ಲ. ಆದರೆ ಐಶ್ವರ್ಯ ರೈ ಮತ್ತು ರಜನಿಕಾಂತ್ ನಟಿಸಿರುವ 'ದಿ ರೋಬೋಟ್' ಚಿತ್ರ ಕೂಡಾ ಅದೇ ದಿನ ಬಿಡುಗಡೆ ಆಗಬಹುದು ಎಂಬ ಸುದ್ದಿ ಬಾಲಿವುಡ್‌ನಲ್ಲಿ ಹೊಸ ಸಂಚಲನ ಮೂಡಿಸಿದೆ! ಮಾಜಿ ಪ್ರೇಮಿಗಳಾದ ಸಲ್ಲೂ ಮತ್ತು ಐಶ್ ನಡುವಣ ಬಾಕ್ಸಾಫೀಸ್ ಕಾಳಗದ ಮಜಾ ಸವಿಯಲು ಬಾಲಿವುಡ್ ಪಂಡಿತರು ಸಿದ್ಧರಾಗಿದ್ದಾರಂತೆ!

'ದಿ ರೋಬೋಟ್' ಚಿತ್ರ ತಮಿಳಿನಲ್ಲಿ 'ಎಂದಿರನ್' ಎಂಬ ಹೆಸರು ಹೊಂದಿದೆ. ಎರಡೂ ಚಿತ್ರ ಏಕಕಾಲಕ್ಕೆ ಬಿಡುಗಡೆಯಾದರೆ ಖಡಾಖಡಿ ಸ್ಪರ್ಧೆ ಏರ್ಪಡುವುದಂತೂ ಖಂಡಿತಾ. ಅಂತೂ ಐಶ್ ಬೇಬಿ, ರಜನಿಕಾಂತ್ ಹೆಗಲ ಮೇಲೆ ಬಂದೂಕು ಇಟ್ಟು ಮಾಜಿ ಪ್ರಿಯಕರನ ಕಡೆಗೆ ಗುರಿ ಇಟ್ಟಿರುವುದಂತೂ ನಿಜ.



# ಮಾಧುರಿಯ ಜಾಲಾಟ

ಚಿತ್ರರಂಗದಿಂದ ದೂರವಾಗಿದ್ದರೂ ಅಭಿಮಾನಿಗಳಿಂದ ದೂರವಾಗದ ಮಾಧುರಿ ದೀಕ್ಷಿತ್ 'ಟ್ವಿಟರ್' ಸಾಮಾಜಿಕ ಜಾಲತಾಣದ ಮೂಲಕ ಅಭಿಮಾನಿಗಳ ಸಂಪರ್ಕಕ್ಕೆ ನಡೆಸಿರುವ ಯತ್ನಕ್ಕೆ ನೂರೆಂಟು ಅಡ್ಡಿಗಳಂತೆ! ಕಳೆದ ಮೇನಲ್ಲಿ ಮಾಧುರಿ ಅಧಿಕೃತವಾಗಿ ಟ್ವಿಟರ್ ಜಾಲತಾಣ ಪ್ರವೇಶಿಸಿದ್ದು ಅಭಿಮಾನಿಗಳ ಜತೆ ಚಾಟಿಂಗ್ ಕೂಡಾ ಶುರು ಮಾಡಿದ್ದಳು. ಆದರೆ ಟ್ವಿಟರ್‌ನಲ್ಲಿ ಈಗಾಗಲೆ ಮಾಧುರಿ ಹೆಸರಿನಲ್ಲಿ ನೂರೆಂಟು ಜಾಲತಾಣಗಳಿವೆಯಂತೆ. ಅಭಿಮಾನಿಗಳಿಗೆ ಯಾವುದು ಅಸಲಿ.. ಯಾವುದು ನಕಲಿ ಅನ್ನುವುದು ಗೊತ್ತಾಗದೇ ಫುಲ್ ಕನ್‌-ಫ್ಯೂಷನ್! ಸ್ವತಃ ಮಾಧುರಿಗೂ ಈ ಗೊಂದಲದಿಂದ ಹೊರಬರುವುದು ಸಾಧ್ಯವಾಗಿಲ್ಲವಂತೆ. ಈಗ ಟ್ವಿಟರ್‌ನವರು ನಕಲಿಗಳನ್ನೆಲ್ಲ ಹುಡುಕಿ ಹುಡುಕಿ ಜಾಲಾಡಿಸುವ ಕೆಲಸದಲ್ಲಿ ತೊಡಗಿದ್ದಾರಂತೆ! ■

ಬಿಂದು

